WPP No. SK/UDP/01. D.O.P - 15th of every month from Udupi HPO
ಬೆಲೆ ರೂ.2.50

**ಹೆಬ್ಬಾರ್ ಎಂಟರ್‌ಪ್ರೈಸಸ್**

ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101.

*ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.*

ಫೋನ್ : 2531493 (O), 2530851 (R), ಮೊಬೈಲ್ : 94484 37893

# ಶ್ರೀ ಶಾರದಾ

ಮಾಸಪತ್ರಿಕೆ - 15 ಆಗಸ್ಟ್ 2008

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102. ☎ 2520754

ಸಂಪುಟ-8 ಸಂಚಿಕೆ-8 ಪುಟಗಳು-8 Registered Under No.KA/SK/UDP/1260/2006-2008 Dated from 01-01-2006 to 31-12-2008.

## ಉಡುಪಿ ಜ್ಞಾನಮಂದಿರಕ್ಕೆ ಶುದ್ಧೀಕೃತ ನೀರಿನ ಉಪಕರಣ ಕೊಡುಗೆ

''ಸಮಾಜದಲ್ಲಿರುವ ಸಂಸ್ಥೆಗಳು ಹಾಗೂ ವ್ಯಕ್ತಿಗಳೊಂದಿಗೆ ಅತ್ಯಂತ ನಿಕಟ ಸಂಬಂಧ ಹೊಂದಿರುವ ಬ್ಯಾಂಕುಗಳು ಸಮಾಜದೊಂದಿಗೆ ನಿರಂತರ ಸಂಪರ್ಕ ಸಾಧಿಸಬೇಕಾಗಿದೆ. ಗ್ರಾಮೀಣ ಪ್ರದೇಶದಲ್ಲಿಯೂ ಅತ್ಯಂತ ವ್ಯವಸ್ಥಿತ ರೀತಿಯಲ್ಲಿ ಸೇವೆಯನ್ನು ನೀಡುತ್ತಿರುವ ಸಿಂಡಿಕೇಟ್ ಬ್ಯಾಂಕ್ ಇಂದು ಗಳಿಸಿದ ಕೋಟ್ಯಾಂತರ ರೂಪಾಯಿ ಲಾಭಾಂಶದ ಒಂದು ಭಾಗವನ್ನು ಸಮಾಜಕ್ಕೆ ಹಂಚಬೇಕೆಂಬ ಧ್ಯೇಯವನ್ನು ಹೊಂದಿದೆ. ಆ ಮೂಲಕ ಈ ಒಂದು ಕಾರ್ಯಕ್ರಮವು ನಿಮ್ಮಿಂದ, ನಮ್ಮಿಂದ ನೆರವೇರಿದೆ. ಶುದ್ಧೀಕೃತ ನೀರು ಕುಡಿಯುವುದರ ಮೂಲಕ ಇಲ್ಲಿಯ ಭಕ್ತ ಬಾಂಧವರ ಆರೋಗ್ಯ ವರ್ಧನೆಯಾಗಲಿ'' ಎಂದು ಸಿಂಡಿಕೇಟ್ ಬ್ಯಾಂಕಿನ ಡಿಜಿಯಂ ಶ್ರೀ ಸುಜೀರ್ ಪ್ರಭಾಕರ ಅವರು ಉಡುಪಿಯ ಕುಂಜಿಬೆಟ್ಟಿನ ಶಾರದಾ ದೇವಸ್ಥಾನದ ಜ್ಞಾನಮಂದಿರಕ್ಕೆ ಸಿಂಡಿಕೇಟ್ ಬ್ಯಾಂಕ್ ವತಿಯಿಂದ ಶುದ್ಧೀಕೃತ ನೀರಿನ ಉಪಕರಣವನ್ನು ಭಕ್ತಬಾಂಧವರ ಉಪಯೋಗಕ್ಕೆ ಅರ್ಪಿಸಿ ನುಡಿದರು.



ಸಿಂಡಿಕೇಟ್ ಬ್ಯಾಂಕ್ ರಥಬೀದಿ ಉಡುಪಿಯ ಶಾಖಾಧಿಕಾರಿ ಶ್ರೀ ಸುಬ್ರಹ್ಮಣ್ಯ ಭಟ್ ಹಾಗೂ ಕುಂಜಿಬೆಟ್ಟು ಶಾಖೆಯ ಶಾಖಾಧಿಕಾರಿ ಶ್ರೀ ನಾಗರಾಜ ಆಚಾರ್ಯರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಶ್ರೀಮತಿ ಪದ್ಮಾಕ್ಷಿಯವರ ಪ್ರಾರ್ಥನೆಯೊಂದಿಗೆ ಪ್ರಾರಂಭಗೊಂಡ ಈ ಕಾರ್ಯಕ್ರಮದಲ್ಲಿ ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಅಧ್ಯಕ್ಷ ಶ್ರೀ ಸಿ. ಎಸ್. ರಾಯರು ಎಲ್ಲರನ್ನೂ ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಸಂಘದ ಕಾರ್ಯದರ್ಶಿ ಶ್ರೀ ವೈ. ಭುವನೇಂದ್ರ ರಾಯರು ಉಪಸ್ಥಿತರಿದ್ದು ಅತಿಥಿಗಳಿಗೆ, ಸಮಾಜ ಬಾಂಧವರಿಗೆ ಅಲ್ಲದೆ ಈ ಉಪಕರಣ ಕೊಡುಗೆಗಾಗಿ ಬ್ಯಾಂಕಿನೊಂದಿಗೆ ನಿರಂತರ ವ್ಯವಹರಿಸಿದ ಶ್ರೀ ಪ್ರಫುಲ್ಲಚಂದ್ರ ರಾಯರಿಗೆ ಧನ್ಯವಾದ ಸಲ್ಲಿಸಿದರು. ಜೊತೆ ಕಾರ್ಯದರ್ಶಿ ಶ್ರೀ ಕೃಷ್ಣಕುಮಾರ್ ರಾವ್ ಮಟ್ಟು ಕಾರ್ಯಕ್ರಮ ನಿರ್ವಹಿಸಿದರು.

### ಕೃತಜ್ಞತೆಗಳು

**ಶ್ರೀಶಾರದಾ ವೇದಿಕೆಯ ಮಹಾಪೋಷಕರಾದ ದಿ। ಡಾ। ಎಲ್ಲೂರು ಚಂದ್ರಶೇಖರರಾಯರ ಸ್ಮರಣಾರ್ಥ ಅವರ ಪುತ್ರ ಡಾ। ವೈ. ಸುದರ್ಶನರಾವ್, ಸರ್ಜನ್, ಉಡುಪಿ ಇವರು ಶ್ರೀಶಾರದಾ ಪತ್ರಿಕೆಯ ಈ ತಿಂಗಳ ಸಂಚಿಕೆಯ ಸಂಪೂರ್ಣ ಪ್ರಾಯೋಜಕತ್ವವನ್ನು ವಹಿಸಿಕೊಂಡಿದ್ದಾರೆ.**

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಉಡುಪಿ ಮತ್ತು ಶ್ರೀ ಶಾರದಾ ಪತ್ರಿಕೆಗಳ ವತಿಯಿಂದ ಪ್ರಾಯೋಜಕರಾದ ಡಾ। ವೈ. ಸುದರ್ಶನ್‌ರಾವ್‌ರವರಿಗೆ ಹೃತ್ಪೂರ್ವಕವಾದ ಕೃತಜ್ಞತೆಗಳು. ಶ್ರೀಶಾರದಾ ಮಾತೆಯು ಅವರ ಕುಟುಂಬಕ್ಕೆ ಆಯುರಾರೋಗ್ಯ ಐಶ್ವರ್ಯಾದಿ ಸಕಲ ಸೌಭಾಗ್ಯಗಳನ್ನು ಕರುಣಿಸಲಿ ಎಂದು ಹಾರೈಸುತ್ತೇವೆ.**

### ಕುಕ್ಕಿಕಟ್ಟೆ ಡಾ। ಚಂದ್ರಶೇಖರರಾವ್



ನಿವೃತ್ತ ವೈದ್ಯಾಧಿಕಾರಿ ಡಾ। ವೈ. ಚಂದ್ರಶೇಖರ ರಾವ್ (70 ವರ್ಷ) ಅವರು ಜುಲೈ 17ರಂದು ಹೃದಯಾಘಾತದಿಂದ ಉಡುಪಿ ಕುಕ್ಕಿಕಟ್ಟೆಯ ಸ್ವಗೃಹದಲ್ಲಿ ನಿಧನರಾದರು. ಅವರು ಮಲ್ಪೆ, ಶಿರ್ವ, ಹೂಡೆ ಹಾಗೂ ಮಣಿಪುರದ ಆರೋಗ್ಯ ಕೇಂದ್ರಗಳಲ್ಲಿ 35 ವರ್ಷಗಳ ಕಾಲ ಸೇವೆ ಸಲ್ಲಿಸಿ ಜನಪ್ರಿಯರಾಗಿದ್ದರು. ಕುಕ್ಕಿಕಟ್ಟೆಯ ತಮ್ಮ ನಿವಾಸದಲ್ಲೂ ವೈದ್ಯಕೀಯ ಸೇವೆ ಸಲ್ಲಿಸಿ ಜನಾನುರಾಗಿಗಳಾಗಿದ್ದರು. ಆಧ್ಯಾತ್ಮಿಕ ಕ್ಷೇತ್ರದಲ್ಲಿ ಅವರು ವಿಶೇಷ ಜ್ಞಾನಗಳಿಸಿ ಸಾಧನೆ ಮಾಡಿದ್ದರು. ಅವರು ಹಲವಾರು ಲೇಖನ ಮತ್ತು ಪುಸ್ತಕಗಳನ್ನು ಪ್ರಕಟಿಸಿದ್ದರು. ಶ್ರೀ ಶಾರದಾ ವೇದಿಕೆಯ ಮಹಾಪೋಷಕರಾಗಿದ್ದ ಅವರು ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಉಡುಪಿಯ ನಿರ್ದೇಶಕರಾಗಿ ಸಂಘದ ಎಲ್ಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಪ್ರೋತ್ಸಾಹಿಸುತ್ತಿದ್ದರು. ಶ್ರೀ ಶಾರದಾ ಪತ್ರಿಕೆಯಲ್ಲಿ ನಿರಂತರವಾಗಿ ವೈಚಾರಿಕ ಲೇಖನಗಳನ್ನಿತ್ತು ಸ್ಫೂರ್ತಿಯನ್ನು ತುಂಬುತ್ತಿದ್ದರು. ಅವರು ಪತ್ನಿ ಮತ್ತು ಉಡುಪಿಯ ಪ್ರಸಿದ್ಧ ಸರ್ಜನ್ ಡಾ। ವೈ. ಸುದರ್ಶನ ರಾವ್ ಸಹಿತ ಇಬ್ಬರು ಪುತ್ರರು, ಓರ್ವ ಪುತ್ರಿಯನ್ನು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುತ್ತಾರೆ.

### ಮುಂಡ್ಕೂರು ಗೋವಿಂದ ರಾವ್



ನಿವೃತ್ತ ಅಧ್ಯಾಪಕ ಮುಂಡ್ಕೂರು ಗೋವಿಂದ ರಾವ್ ಅವರು (68 ವರ್ಷ) ತಾ.3-8-2008 ರಂದು ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯಲ್ಲಿ ನಿಧನರಾದರು.

ಹೆಜಮಾಡಿಯಲ್ಲಿ ವಾಸ್ತವ್ಯವಿದ್ದ ಇವರು ಪ್ರಾಥಮಿಕ ಶಾಲೆಗಳಲ್ಲಿ ಅಧ್ಯಾಪಕರಾಗಿ ಶಿವಮಂತೂರು, ಫಲಿಮಾರು, ಮುದರಂಗಡಿ ಸೇರಿ, ಮುಂಡ್ಕೂರು, ಉಡುಪಿ ಮೊದಲಾದ ಕಡೆ ಸೇವೆ ಸಲ್ಲಿಸಿ 1998ರಲ್ಲಿ ಹೆಜಮಾಡಿ ಪ್ರೌಢಶಾಲೆಯಲ್ಲಿ ಸೇವೆ ಸಲ್ಲಿಸುತ್ತಿರುವಾಗ ನಿವೃತ್ತಿ ಹೊಂದಿದ್ದರು.

ಕನ್ನಡ ಅಧ್ಯಾಪಕರಾಗಿದ್ದ ಗೋವಿಂದ ರಾಯರು ಬೇರೆ ಬೇರೆ ಶಾಲೆಗಳು ಹಾಗೂ ಸಂಘ ಸಂಸ್ಥೆಗಳಲ್ಲಿರುವ ವಿದ್ಯಾರ್ಥಿಗಳಿಗೆ ಯಕ್ಷಗಾನ ಕಲಿಸಿ ಜನಪ್ರಿಯ ಗುರುಗಳೆನಿಸಿದ್ದರು. ಮಹಿಳಾ ಯಕ್ಷಗಾನ ತಂಡವು ಇವರ ನೇತೃತ್ವದಲ್ಲಿ ಬೆಂಗಳೂರು ಮೊದಲಾದ ಕಡೆ ಅನೇಕ ಪ್ರದರ್ಶನಗಳನ್ನು ನೀಡಿತ್ತು. ಶಿಸುಬದ್ಧವಾದ ಅರ್ಥಗಾರಿಕೆಯಿಂದ ತಾಳಮದ್ದಳೆಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದರು. ಪ್ರವಚನಕಾರರಾಗಿ ದುಡಿದಿದ್ದ ಇವರು ಪುರಾಣ, ಮಹಾಭಾರತ, ರಾಮಾಯಣ ಕಾವ್ಯಗಳಲ್ಲಿ ವಿಶೇಷ ಪ್ರಭುತ್ವ ಹೊಂದಿದ್ದರು.

ನಿವೃತ್ತಿಯ ನಂತರ ಹಲವಾರು ಸೇವಾ ಸಂಸ್ಥೆಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದ ಗೋವಿಂದರಾಯರು ಇತ್ತೀಚೆಗೆ ಪಡುಬಿದ್ರಿ ಉದಯಾದ್ರಿಯ ಬಾಲಗಣಪತಿ, ಪ್ರಸನ್ನಪಾರ್ವತಿ ದೇವಳದ ಜೀರ್ಣೋದ್ಧಾರ ಕಾರ್ಯದಲ್ಲಿ ಶ್ರಮವಹಿಸಿದ್ದರು.

### ಎಂ. ವ್ಯಾಸ



ಕನ್ನಡದ ಶ್ರೇಷ್ಠ ಸಣ್ಣ ಕತೆಗಾರ ಎಂ. ವ್ಯಾಸರವರು (67 ವರ್ಷ) ಜುಲೈ 23ರಂದು ಹೃದಯಾಘಾತದಿಂದ ಗಡಿನಾಡು ಕಾಸರಗೋಡಿನ ಕೂಡ್ಲು ಬಳಿಯ ಮನ್ನಿಪಾಡಿಯ ಕೃಪಾನಿಧಿ ನಿವಾಸದಲ್ಲಿ ನಿಧನ ಹೊಂದಿದರು. 1941ರಲ್ಲಿ ಶ್ರೀ ಸುಬ್ರಾಯ ಶ್ಯಾನುಭಾಗ್ ಮತ್ತು ಶ್ರೀಮತಿ ಲಕ್ಷ್ಮೀಅಮ್ಮ ದಂಪತಿಗಳ ಪುತ್ರರಾಗಿ ಜನಿಸಿದ ವ್ಯಾಸರು ಕೃಷಿ ಮತ್ತು ಸಾಹಿತ್ಯ ಸೇವೆಯಲ್ಲಿ ತೊಡಗಿಕೊಂಡಿದ್ದರು. ಕಂಬನಿ (ಕಥಾ ಸಂಕಲನ), ಸ್ನಾನ (ಮಿನಿ ಕಾದಂಬರಿ), ಕೃತ (ಕಥಾ ಸಂಕಲನ), ಕ್ಷೇತ್ರ, ಸುಳಿ (ಕವನ ಸಂಕಲನ), ಜನಪಥ (ವೈಚಾರಿಕ ಲೇಖನಗಳ ಸಂಗ್ರಹ) ಇವರ ಪ್ರಮುಖ ಕೃತಿಗಳು. ಇವರು 'ದಿಗಂತ' ಎಂಬ ಕಾದಂಬರಿ ರಚಿಸಿದ್ದರು. 'ಅಜಂತಾ' ಎಂಬ ಸಣ್ಣಕಥಾ ಪ್ರಧಾನ ಮಾಸ ಪತ್ರಿಕೆಯನ್ನು ಪ್ರಕಟಿಸಿದ್ದರು. 'ನಾಡಪ್ರೇಮಿ' ದೈನಿಕದ ಸಂಪಾದಕರಾಗಿದ್ದರು. ಇವರ 'ಕೃತ' ಕಥಾ ಸಂಕಲನ ಪಠ್ಯ ಪುಸ್ತಕವಾಗಿ ಗುರುತಿಸಿಕೊಂಡಿದೆ. 500ಕ್ಕೂ ಹೆಚ್ಚು ಕವನಗಳು ಮತ್ತು 300ಕ್ಕೂ ಹೆಚ್ಚು ಕಥೆಗಳನ್ನು ಹಾಗೂ ಅನೇಕ ಚಿಂತನ, ಅಂಕಣ ಲೇಖನಗಳನ್ನು ಬರೆದಿರುವ ಇವರು 'ಅಪೂರ್ವ ಕಲಾವಿದರು' ಸಂಸ್ಥೆಯ ವಿಶೇಷ ಆಹ್ವಾನಿತರಾಗಿ ಸೇವೆಸಲ್ಲಿಸಿದ್ದಾರೆ. ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿ ನಡೆದ ಪ್ರಥಮ ಸ್ಥಾನಿಕ ಬ್ರಾಹ್ಮಣ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪಾಲ್ಗೊಂಡು ಪ್ರೋತ್ಸಾಹಿಸಿದ್ದರು. ಶ್ರೀ ಸುಬ್ರಹ್ಮಣ್ಯ ಸಭಾದ ಶತಮಾನೋತ್ಸವ ಆಚರಣೆಯ ಸಂದರ್ಭದಲ್ಲಿ ಇವರನ್ನು 'ಸಾಹಿತ್ಯ ಸಾಧನೆ'ಗಾಗಿ ಸನ್ಮಾನಿಸಲಾಗಿತ್ತು. ಪ್ರಚಾರ-ಪ್ರಶಸ್ತಿಗಳಿಂದ ದೂರವಿದ್ದರೂ ಇವರಿಗೆ 'ಬೇವಿಂಜೆ ಕಕ್ಕಿಲ್ಲಾಯ ಪ್ರಶಸ್ತಿ' ಲಭಿಸಿದೆ. ಇವರು ಪತ್ನಿ ಶ್ರೀಮತಿ ಶಶಿಕಲಾ ವ್ಯಾಸ ಹಾಗೂ ಮಕ್ಕಳಾದ ಡಾ। ತೇಜಸ್ವಿ ವ್ಯಾಸ, ಶ್ರೀಮತಿ ಕೃಪಾ ಕೆ.ಜಿ. ಮತ್ತು ಶ್ರೀಮತಿ ಪ್ರತಿಮಾ ಜೆ. ಎಚ್. ಹಾಗೂ ಅಪಾರ ಬಂಧು-ಮಿತ್ರರು, ಸಾಹಿತ್ಯಾಭಿಮಾನಿಗಳನ್ನು ಅಗಲಿರುತ್ತಾರೆ.

**ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಆಶ್ರಯದಲ್ಲಿ**

**ಸೌರ ಋಗುಪಾಕರ್ಮ**ವು

**ತಾ.12-09-2008ರಂದು ಶುಕ್ರವಾರ ಶ್ರೀ ಶಾರದಾ ಮಂಟಪದಲ್ಲಿ ನಡೆಯಲಿದ್ದು ಬೆಳಿಗ್ಗೆ 9-30ರಿಂದ ಕಾರ್ಯಕ್ರಮವು ಪ್ರಾರಂಭವಾಗಲಿದೆ.**

*ಸಮಾಜ ಬಾಂಧವರು ಸಮಯಕ್ಕೆ ಸರಿಯಾಗಿ ಬಂದು ಉಪಾಕರ್ಮದಲ್ಲಿ ಭಾಗವಹಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.*

- ಕಾರ್ಯದರ್ಶಿ